ಹೋಗಿದ್ದೇ ಇಲ್ಲ. ಅವ್ವ ನಮ್ಮೂರಿಂದ ಎರಡು ಕಿ.ಮೀ. ದೂರದ ತವರೂರು ದೊಡ್ಡಿಗೆ ಹೋದರೂ ಸಂಜೆಯೇ ವಾಪಸ್ ಆಗುತ್ತಾಳೆ. ಅಪ್ಪ ತನ್ನನ್ನು ಯಾವುದೇ ಜಾತ್ರೆ, ಊರಿಗೆ ಕರೆದುಕೊಂಡು ಹೋಗಿಲ್ಲವೆಂದು ಅವ್ವ ಆಗಾಗ ಕೊರಗುವುದುಂಟು.

ಒಮ್ಮೆ ಗರ್ಭಕೋಶದ ಚಿಕಿತ್ಸೆಗೆಂದು ಅವ್ವ ಮಂಡ್ಯದ ಆಸ್ಪತ್ರೆಯಲ್ಲಿ ದಾಖಲಾದಳು. ನಮ್ಮೂರಿನಿಂದ ನಲವತ್ತು ಕಿ.ಮೀ. ದೂರ. ಅವ್ವ ಆಸ್ಪತ್ರೆಯಲ್ಲಿರುವಷ್ಟು ದಿನ ಅಪ್ಪ ಆಸ್ಪತ್ರೆಗೆ ಹೋಗಿ ಬರುತ್ತಿದ್ದ. ನಮ್ಮ ಮನೆಗೆ ಏನಾದರೂ ಅಪ್ಪ ಬಂದರೆ ಅವ್ವ ಒಬ್ಬಳೇ ಇರುತ್ತಾಳೆ ಎಂದು ಮರುದಿನವೇ ವಾಪಸ್ಸು ಹೋಗಲು ತಹತಹಿಸುತ್ತಾನೆ. ಅವ್ವ ಕೂಡ ಅಷ್ಟೇ. ಏನಾದರೂ ಮನೆಯಿಂದ ಹೊರಗೆ ಬಂದರೆ, ತನ್ನ ಗಂಡ ತನಗಾಗಿ ಕಾಯುತ್ತಿರುತ್ತಾನೆಂದು ಬೇಗ ಹಿಂದಿರುಗುವ ತವಕ ತೋರುತ್ತಾಳೆ. ಈಗ ಅಪ್ಪನಿಗೆ ಕೋಪ ಸ್ವಲ್ಪ ಕಡಿಮೆಯಾಗಿದೆ. ಬಹುಶಃ ವಯಸ್ಸು, ಶರೀರದಲ್ಲಿನ ನಿಶ್ಶಕ್ತಿ ಅಹಂ ಅನ್ನು ಕಡಿಮೆ ಮಾಡಿರಬೇಕು. ಅವ್ವನನ್ನು ಒಂದು ದಿನ ಬಿಟ್ಟು ಬೆಂಗಳೂರಿಗೆ ಬಂದಾಗ ಅವ್ವನ ಹೆಸರು ಹೇಳಿದರೆ ಸಾಕು, ಕಣ್ಣೀರಧಾರೆ ಶುರುವಾಗುತ್ತದೆ. ಮಾತು ಗದ್ಗದಿತವಾಗುತ್ತದೆ.

ಅವ್ವ ಎಂದೂ ಅಪ್ಪನ ಹೆಸರು ಹೇಳಿಲ್ಲ. ಹೆಸರು ಹೇಳಿ ಕರೆದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಗಂಡನ ಹೆಸರು ಹೇಳುವುದು ನಿಷಿದ್ಧ. ವಯಸ್ಸಿನಲ್ಲಿ ಹಿರಿಯ ಮತ್ತು ಹೆಸರು ಹೇಳಿದರೆ ಗಂಡನ ಆಯಸ್ಸು ಕಡಿಮೆಯಾಗುತ್ತದೆ ಎಂಬ ನಂಬಿಕೆ. ಹಾಗಾಗಿ, ನಮ್ಮ ಯಜಮಾನ, ಯಜಮಾನರು, ನಮ್ಮ ಮನೆಯವರು, ಇವರ ಅಪ್ಪ ಎಂಬ ಸಂಬೋಧನೆ. ಇತ್ತೀಚೆಗೆ ಮದುವೆ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಗಂಡನ ಹೆಸರು ಹೇಳುವಂತೆ ವಧುವಿಗೆ ಪೀಡಿಸುವುದುಂಟು. ಹತ್ತು ವರ್ಷ ದಾಟುವ ಮುನ್ನವೇ ಬಾಲ್ಯ ವಿವಾಹವಾದ ಅವ್ವ, ಅಪ್ಪನ ಹೆಸರು ಹೇಳಿದ್ದಳೇ? ಗೊತ್ತಿಲ್ಲ. ಒಮ್ಮೆ ಕೇಳಿದೆ. 'ನೆನಪಿಲ್ಲ' ಎಂದು ಜಾರಿಕೊಂಡಳು. ಆಟವಾಡುವ ವಯಸ್ಸಿನಲ್ಲಿ ಮದುವೆಯ ಬಂಧನದ ಭಯದಲ್ಲಿ ಮರೆತಿರಬೇಕು.

ಸಾಮಾನ್ಯವಾಗಿ ಎಲ್ಲಾ ಹೆಂಗಸರು ಮುತ್ತೈದೆ ಸಾವನ್ನು ಬಯಸುವುದು ಸಹಜ. ಆದರೆ, ನನ್ನವ್ವನಿಗೆ ತನ್ನ ಗಂಡ ತನಗಿಂತ ಮೊದಲೇ ಸಾಯಲಿ ಎಂಬ ಬಯಕೆ.

